ನಾನು ಬೆಪ್ಪಾಗಿ ನಿಂತಿರಬೇಕಾದರೆ ಆಕೆ ಕೆಳಗಿಳಿದು ಬಂದು ನನ್ನ ಭುಜಗಳನ್ನು ಸ್ಪರ್ಶಿಸುವುದೇ ತಡ, ಅಲ್ಲಿ ಹಾಲತೊರೆಯಂಥ ರೆಕ್ಕೆಗಳು ಒಡಮೂಡುತ್ತಿದ್ದವು. 'ಹೂಂ, ಈಗಲಾದರೂ ಹಾರು' ಎಂದು ಹೇಳಿದುದೇ ತಡ, ತಿಂಗಳ ಬೆಳಕಿನ ಹಾಲ್ಗಡಲನ್ನು ಈಜುತ್ತ ಚಂದ್ರನೆಡೆಗೆ ಸಾಗುತ್ತಿದ್ದೆವು. ದೂರದಲ್ಲೆಲ್ಲೊ ಅತಿ ಸುಶ್ರಾವ್ಯವಾದ ವೀಣೆಯಿಂಚರ, ವಾತಾವರಣ ತುಂಬ ಮಲ್ಲಿಗೆ, ಪಾರಿಜಾತ, ಗುಲಾಬಿ ಸಮ್ಮಿಶ್ರಿತ ಸುವಾಸನೆ. ನಾವಿಬ್ಬರೂ ಬೆರಳೊಳಗೆ ಬೆರಳು ಹೆಣೆದು, ಸರೋವರದಲ್ಲಿ ತೇಲುವ ಹಂಸಗಳಂತೆ ನಿಧಾನವಾಗಿ ಚಂದ್ರನ ಕಡೆಗೆ ಸಾಗುತ್ತಿದ್ದೆವು.

ಚಂದ್ರನನ್ನು ಸಮೀಪಿಸುತ್ತಿದ್ದಂತೆಯೆ ಚಿತ್ರ ಬದಲಾಗುತ್ತಿತ್ತು. ಅತ್ಯಂತ ಮನಮೋಹಕವಾಗಿ ಕಂಗೊಳಿಸುತ್ತಿದ್ದ ಚಂದ್ರಬಿಂಬ ಪೌರ್ಣಿಮೆಯ ಮರುದಿನದಿಂದ ಕ್ಷೀಣಿಸುತ್ತ ಕ್ಷೀಣಿಸುತ್ತ ಬಿದಿಗೆ ಚಂದ್ರನ ಆಕಾರ ತಾಳುತ್ತಿತ್ತು. ಆ ನಂತರ ಅದು ಹರಿತವಾದ ಚಂದ್ರಾಯುಧವಾಗಿ ರೂಪಾಂತರಗೊಳ್ಳುತ್ತಿತ್ತು. ಆ ಚಂದ್ರಾಯುಧ ಯಾವುದೇ ಸದ್ದುಗದ್ದಲವಿಲ್ಲದೆ ಪಸರಿಸಿದ ಬೆಳದಿಂಗಳನ್ನು ಸೀಳುತ್ತ ಸೀಳುತ್ತ ವೇಗವಾಗಿ ನನ್ನತ್ತ ಧಾವಿಸಿ...

ಕನಸನ್ನು ನೆನಸಿಕೊಂಡರೆ ಈಗಲೂ ಮೈ ನಡುಗುತ್ತದೆ, ನೆತ್ತರು ಹೆಪ್ಪುಗಟ್ಟುತ್ತದೆ, ಉಸಿರು ನಿಂತಂತಾಗುತ್ತದೆ... ಹಂ... ಇರಲಿ. ಹೇಳುವುದನ್ನು ಹೇಳಲೇಬೇಕಲ್ಲ. 'ಹಾಗೇ ಶರವೇಗದಿಂದ ಧಾವಿಸಿ ಬಂದ ಚಂದ್ರಾಯುಧ... ಆ ಚಂದ್ರಾಯುಧದ ಯಮಹರಿತವಾದ ಎರಡು ಅಂಚುಗಳು ಚರ್ರನೆ

